## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ
## ಘನ ನ್ಯಾಯಾಲಯದಲ್ಲಿ

**ಪ್ರಕರಣ ಸಂಖ್ಯೆಃ ಎಸ್.ಸಿ 26/2020**

ದಿನಾಂಕಃ 07.09.2021
(ಸಾಕ್ಷಿಗೆ ಪ್ರಮಾಣ ವಚನ
ಬೋಧಿಸಲಾಯಿತು.)

ಪ್ರಾ.ಸಾಃ 9 (ಚಾ.ಸಾ.8)

| | | |
|---|---|---|
| ಹೆಸರು | ಃ | ಇರ್ಫಾನ್ ಬೇಗ್ |
| ತಂದೆಯ ಹೆಸರು | ಃ | ಮುಸ್ತಾಪ್ ಬೇಗ್ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ದಿನಸಿ ಅಂಗಡಿ |
| ವಾಸ ಸ್ಥಳ | ಃ | ಚನ್ನಪಟ್ಟಣ |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಸೈಯದ್ ಜಬೀರ್ ಹಾಗು ಚಾಸಾ.2 – ಫರಾನ್ ಮೆಹದಿ ಗೊತ್ತು.

2. ಒಂದೂವರೆ ವರ್ಷದ ಹಿಂದೆ ಚನ್ನಪಟ್ಟಣ ಪೊಲೀಸ್ ಠಾಣೆಗೆ ನಾನು ಮತ್ತು ನನ್ನ ತಮ್ಮ ಜಿಬ್ರಾನ್ ಹೋಗಿದ್ದೆವು. ಪೊಲೀಸರು ನಮ್ಮನ್ನು ಹಾಗು ಆರೋಪಿಯನ್ನು ಜೀಪಿನಲ್ಲಿ ಶೇರವ ಹೋಟೆಲ್ ಬಳಿ ಆಟೋ ನಿಲ್ದಾಣದ ಹಿಂಭಾಗದ ತೋಪಿನ ಬಳಿಯ ಮೋರಿಯ ಬಳಿ ಕರೆದುಕೊಂಡು ಹೋಗಿದ್ದು, ಅಲ್ಲಿ ಬಿದ್ದಿದ್ದ ಚಾಕುವನ್ನು ಆರೋಪಿ ತೆಗೆದುಕೊಟ್ಟಿದ್ದನ್ನು ಪೊಲೀಸರು ತೆಗೆದುಕೊಂಡರು. ಚಾಕುವಿಗೆ ರಕ್ತ ಹತ್ತಿತ್ತು. ಪೊಲೀಸರು ಅಲ್ಲಿ ನಮ್ಮ ಸಹಿ ಪಡೆದುಕೊಂಡರು. ನಿಪಿ.4 - ಅಮಾನತ್ತು ಪಂಚನಾಮೆಯಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.4(ಬಿ) ಎಂದು ಗುರುತಿಸಲಾಯಿತು. ಸದರಿ ಚಾಕು ಸ್ವಲ್ಪ ಮುರಿದಿತ್ತು. ಅದನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಎಂ.ಒ.3 ನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಕೆವಿಕೆ., ವಕೀಲರಿಂದಃ</u>**

**3.** ಸದರಿ ಮೋರಿಯ ಮೇಲಿನ ಕಲ್ಲು ಹಾಸಿನ (ಸ್ಲಾಬ್) ಪಕ್ಕ ಸದರಿ ಚಾಕು ಬಿದ್ದಿತ್ತು. ಸದರಿ ಸ್ಲಾಬ್ ಮೇಲೆ ಜನರು ಓಡಾಡುತ್ತಾರೆ ಅಂದರೆ ಸರಿಯಲ್ಲ. ಸದರಿ ಮೋರಿ ಆಲ್ ಅಮಿನ್ ಶಾಲೆಯ ರಸ್ತೆಗೆ ಹೊಂದಿಕೊಂಡಂತೆ ಇದೆ ಅಂದರೆ ಸರಿಯಲ್ಲ. ಸದರಿ ಚಾಕು ಜನರಿಗೆ ಕಾಣುವಂತೆ ಬಿದ್ದಿತ್ತಾ ಅಂದರೆ ಸಾಕ್ಷಿ ಒಂದು ಬಾರಿ ಹೌದು ಎಂದು ಇನ್ನೊಂದು ಬಾರಿ ಕಾಣುತ್ತಿರಲಿಲ್ಲ ಎಂದು ನುಡಿದಿದ್ದಾರೆ.

**4.** ನಾನು ಮತ್ತು ಮುಷಾ ಫೀರ್ ಸ್ನೇಹಿತರು ಅಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಶೇರುವ ಹೋಟೆಲ್ ಬಳಿ ಕರೆದುಕೊಂಡು ಹೋಗಿರಲಿಲ್ಲ ಹಾಗು ಅಲ್ಲಿ ಆರೋಪಿ ಯಾವುದೇ ಚಾಕುವನ್ನು ನನ್ನ ಸಮಕ್ಷಮ ತೋರಿಸಿ, ತೆಗೆದುಕೊಟ್ಟಿರಲಿಲ್ಲ ಅಂದರೆ ಸರಿಯಲ್ಲ. ಪೊಲೀಸರು ನನ್ನ ಸಮಕ್ಷಮ ಸದರಿ ಸ್ಥಳದಲ್ಲಿ ಯಾವುದೇ ಮಹಜರ ಮಾಡಿಲ್ಲ ಹಾಗು ನಾನು ಸದರಿ ಮಹಜರಿಗೆ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಅಂದರೆ ಸರಿಯಲ್ಲ.

**<u>ಮರುವಿಚಾರಣೆಃ ಇಲ್ಲ.</u>**

**<u>(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).</u>**

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

(ರಮಾ ಬಿ.ಜಿ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**